೨–೩೦ ಪಿ. ಎಂ.

ಒಬ್ಬ ಮಾನ್ಯ ಸದಸ್ಯರು.—ವಿದ್ಯುತ್ ಕಂಬದಲ್ಲಿ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದರೆ ೧೫–೨೦ ದಿವಸಗಳಾದರೂ ಸರಿ ಮಾಡುವುದಿಲ್ಲ. ಪವರ್ ಸಪ್ಲೈ ಆಗುವುದು ನಿಂತುಹೋಗುತ್ತದೆ.

ಉಪಾಧ್ಯಕ್ಷರು.—ತಾವು ಕೇಳುವುದು ಉಪ ಪ್ರಶ್ನೆಯಾಗುತ್ತದೆ, ಈಗಾಗಲೇ ಮಂತ್ರಿಗಳು ಸಾಕಷ್ಟು ಉತ್ತರ ಕೊಟ್ಟಿದ್ದಾರೆ ಈಗ ಬೇರೆ ಪ್ರಶ್ನೆ ಎತ್ತಿಕೊಳ್ಳೋಣ.

ಮತ್ತೊಬ್ಬ ಮಾನ್ಯ ಸದಸ್ಯರು.—ರೈತರಿಗೆ ಉಂಟಾಗಿರತಕ್ಕ ತೊಂದರೆಗಳನ್ನು ಇಲ್ಲಿ ಹೇಳ ಬೇಕಾಗುತ್ತದೆ.

ಉಪಾಧ್ಯಕ್ಷರು.—ತಾವು ಪ್ರತ್ಯೇಕ ಪ್ರಶ್ನೆ ಕೇಳಿ, ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ ಬಿ ಚಿಮ್ಮನಕಟ್ಟಿ.—ಮಂತ್ರಿಗಳು ಇರತಕ್ಕ ತೊಂದರೆಗಳ ಬಗ್ಗೆ ಹೇಳಿದ್ದಾರೆ. ತೊಂದರೆ ಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ಬೇರೆ ರಾಜ್ಯಗಳಿಂದ ಪವರ್ ತರಿಸುವುದಕ್ಕೆ ಪ್ರಯತ್ನಪಟ್ಟಿ ದ್ದಾರೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಜೆ. ಎಚ್. ಪಟೇಲ್.—ಈಗಾಗಲೇ ಹೇಳಿದ್ದೇನೆ. ಮಹಾರಾಷ್ಟ್ರ, ಆಂಧ್ರಪ್ರದೇಶಗಳಿಂದ ನಾವು ವಿದ್ಯುತ್ತನ್ನು ಪಡೆಯುತ್ತಿದ್ದೇವೆ. ಪ್ರತಿ ವರ್ಷ ಈ ತರಹ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದ್ದೇವೆ. ಅದನ್ನು ತಪ್ಪಿಸುವುದಕ್ಕೋಸ್ಕರ ಶಾಶ್ವತವಾದ ಕಾರ್ಯಕ್ರಮ ಹಾಕಿಕೊಳ್ಳಲಿಕ್ಕೆ. ಯೋಜನೆಯನ್ನು ಹಾಕಿಕೊಂಡು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಮುತ್ತಿನಪೆಂಡಿಮಠ್.—ವಿದ್ಯುತ್ ಕೆಡಿತವಾಗುವುದರಿಂದ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುತ್ತಿದೆ. ಪ್ರೆಷರ್ ಕಡಿಮೆಯಾದರೆ ನೀರು ಬರುವುದಿಲ್ಲ, ನಮ್ಮಲ್ಲಿ ಕುಡಿಯುವ ನೀರಿನ ವ್ಯವಸ್ಥೆ ವಿದ್ಯುತ್ತನ್ನು ಅವಲಂಬಿಸಿಕೊಂಡಿದೆ. ಇದರ ಬಗ್ಗೆ ಮಂತ್ರಿಗಳು ಕೂಡ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ.ಎಚ್. ಪಟೇಲ್.—ಅದರ ಬಗ್ಗೆ ವಿಚಾರ ಮಾಡಲಾಗುತ್ತಿದೆ.

(ii) ವಿಷಯ.—ಸೀಮೆಎಣ್ಣೆ ಕೊರತೆಯಿಂದ ರಾಜ್ಯದ ಜನರಿಗೆ ಉಂಟಾಗಿರತಕ್ಕ ತೊಂದರೆಯ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಸೀಮೆಎಣ್ಣೆ ಕೊರತೆಯಿಂದ ರಾಜ್ಯದ ಜನರಿಗೆ ಉಂಟಾಗಿರತಕ್ಕ ತೊಂದರೆಯ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ. (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು)—ಸನ್ಮಾನ್ಯ ಉಪಾಧ್ಯಕ್ಷರೇ ಸೀಮೆಎಣ್ಣೆ ವಿತರಣೆ ಕೇಂದ್ರ ಸರ್ಕಾರದ ನೀತಿಗನುಸಾರವಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಅದರ ಬಗ್ಗೆ ಇರತಕ್ಕ ನ್ಯೂನತೆಗಳನ್ನು ಸಭೆಯ ಗಮನಕ್ಕೆ ಹೇಳಿಕೆಯ ಮುಖಾಂತರ ತರಲಿಕ್ಕೆ ಬಯಸುತ್ತೇನೆ.

೧೪–೨–೧೯೮೫ರಿಂದ ಕೇಂದ್ರ ಸರ್ಕಾರದವರು ಸೀಮೆ ಎಣ್ಣೆ ಬೆಲೆಯಲ್ಲಿ ದ್ವಿಮುಖ ನೀತಿಯನ್ನು ಜಾರಿಗೆ ತಂದಿದ್ದಾರೆ. ಈ ನೀತಿಯ ಪ್ರಕಾರ ಒಟ್ಟು ಸರಬರಾಜಾದ ಸೀಮೆ ಎಣ್ಣೆಯಲ್ಲಿ ಶೇಕಡಾ ೭೦ರಷ್ಟು ಸೀಮೆ ಎಣ್ಣೆಯನ್ನು ಕಡಿಮೆ ಬೆಲೆಯಲ್ಲೂ ಉಳಿದ ಶೇಕಡಾ ೩೦ರಷ್ಟನ್ನು ಹೆಚ್ಚಿನ ಬೆಲೆಯಲ್ಲೂ ಮಾರಾಟ ಮಾಡಬೇಕೆಂದು ಕೇಂದ್ರ ಸರ್ಕಾರದ ಆದೇಶ. ರಾಜ್ಯ ಸರ್ಕಾರ ಈ ಕೇಂದ್ರ ಸರ್ಕಾರದ ನೀತಿಯನ್ನು ಚಾಚೂ ತಪ್ಪದೆ ಜಾರಿಗೆ ತಂದಿದೆ.

೨. ದ್ವಿಮುಖ ನೀತಿಯ ಪ್ರಕಾರ ಕಡಿಮೆ ಬೆಲೆಯ ಸೀಮೆ ಎಣ್ಣೆಯ ಬೆಲೆಯನ್ನು ಲೀಟರ್ ಒಂದಕ್ಕೆ ರೂ. ೧-೮೫ ಪೈಸೆಯಂತೆಯೂ ಮತ್ತು ಹೆಚ್ಚಿನ ಬೆಲೆಯ ಸೀಮೆ ಎಣ್ಣೆಯ ಬೆಲೆಯನ್ನು ಲೀಟರ್ ಒಂದಕ್ಕೆ ರೂ. ೫-೩೨ ಪೈಸೆಯಂತೆಯೂ ನಿಗದಿ ಮಾಡಲಾಗಿತ್ತು. ಈ ಬೆಲೆಗಳು ಬೆಂಗಳೂರಿಗೆ ಮಾತ್ರ ಅನ್ವಯವಾಗಿದ್ದು, ಬೇರೆ ಬೇರೆ ಜಿಲ್ಲೆಗಳಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳು ಸಾಗಾಣಿಕೆಗೆ ತಗಲುವ ವೆಚ್ಚಕ್ಕೆ ಹೊಂದಿಕೊಂಡು ಬೆಲೆಗಳನ್ನು ನಿಗದಿ ಮಾಡಿದ್ದಾರೆ.

ಸಿ. ಕಡಿಮೆ ಬೆಲೆ ಸೀಮೆ ಎಣ್ಣೆಗೂ ಹೆಚ್ಚಿನ ಬೆಲೆಯ ಸೀಮೆ ಎಣ್ಣೆಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಕಡಿಮೆ ಬೆಲೆ ಸೀಮೆ ಎಣ್ಣೆಯನ್ನು ಹೆಚ್ಚಿನ ಬೆಲೆಗೆ ಮಾರುವ ಸಂಭವವಿರುವುದರಿಂದ, ತಿಂಗಳ ಮೊದಲ ಮೂರು ವಾರಗಳು ಅಂದರೆ ದಿನಾಂಕ ೧ರಿಂದ ೨೧ರ ವರೆಗೆ ಕಡಿಮೆ ಬೆಲೆಯ ಸೀಮೆ ಎಣ್ಣೆಯನ್ನು ಉಳಿದ, ತಿಂಗಳ ಕಡೆಯ ವಾರ ಅಂದರೆ ದಿನಾಂಕ ೨೧ರಿಂದ ತಿಂಗಳ ಕೊನೆಯವರೆಗೆ ಹೆಚ್ಚಿನ ಬೆಲೆಯ ಸೀಮೆ ಎಣ್ಣೆಯನ್ನು ಮಾರಾಟ ಮಾಡಬೇಕೆಂದು ಈ ಹಿಂದೆ ವ್ಯವಸ್ಥೆ ಮಾಡಲಾಗಿತ್ತು. ಒಂದೇ ವ್ಯಾಪಾರಿ ಅಥವಾ ವ್ಯಾಪಾರ ಕೇಂದ್ರದ ಮೂಲಕ ಈ ಎರಡೂ ಬೆಲೆಯ ಸೀಮೆ ಎಣ್ಣೆಯನ್ನೂ ಮಾರಾಟ ಮಾಡುವಾಗ ಸೀಮೆ ಎಣ್ಣೆಯ ಬೆಲೆಯಲ್ಲಿ ವಿರಂಪೇರುಗಳು ಆಗುತ್ತವೆಂಬ ದೂರು ಬಂದಿದ್ದರಿಂದ ವಿತರಣಾ ವ್ಯವಸ್ಥೆಯನ್ನು ಮತ್ತೆ ಪುನರ್ ವಿಮರ್ಶಿಸಿ ಹೊಸ ಪದ್ಧತಿಯನ್ನು ಜಾರಿಗೆ ತರಲಾಗಿದೆ.

೪. ಈ ಹೊಸ ಪದ್ಧತಿಯ ಪ್ರಕಾರ, ಈಗ ಹಾಲೀ ಸೀಮೆ ಎಣ್ಣೆ ಮಾರಾಟ ಮಾಡುತ್ತಿರುವ ಕೈಗಾಡಿ ಮಾರಾಟಗಾರರು ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ಕಡಿಮೆ ಬೆಲೆಯ ಸೀಮೆ ಎಣ್ಣೆಯನ್ನು ಇಡೀ ತಿಂಗಳು ಮಾರಾಟ ಮಾಡಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್ಸ್.—ಸನ್ಮಾನ್ಯ ಉಪಾಧ್ಯಕ್ಷರೇ ಸೀಮೆ ಎಣ್ಣೆ ನಮ್ಮ ರಾಜ್ಯದಲ್ಲಿ ಸರಿಯಾದ ರೀತಿಯಲ್ಲಿ ಸಿಗದಿರುವುದರಿಂದ ದೊಡ್ಡ ಹಾಹಾಕಾರವೆದ್ದಿದೆ. ರಾಜ್ಯದ ಜನರಿಗೆ ಸೀಮೆಎಣ್ಣೆ ಸಿಗುತ್ತಿಲ್ಲ. ದ್ವಿಮುಖ ಬೆಲೆ ಜಾರಿಗೆ ಬಂದ ನಂತರ, ದ್ವಿಮುಖ ಬೆಲೆ, ದ್ವಿಮುಖ ನೀತಿಯಾಗಿದೆ. ಇವತ್ತಿನ ದಿವಸ ಯಾರ್ಯಾರು ೧–೮೫ ಪೈಸೆಗೆ ೧ ಲೀಟರ್ ಸೀಮೆಎಣ್ಣೆ ಮಾರಬೇಕೆಂದು ನಿಗದಿ ಮಾಡಿದ್ದೀರೊ ಅವರು ಇವತ್ತು ೩–೨೨ ಪೈಸೆಗೆ ಸೀಮೆಎಣ್ಣೆಯನ್ನು ಮಾರಾಟ ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ತಮ್ಮ ಹೇಳಿಕೆಯಲ್ಲಿ ಹೇಳಿರುವಂತೆ ಯಾರೂ ಮಾರಾಟ ಮಾಡುತ್ತಿಲ್ಲ. ಎಲ್ಲರೂ ಕೂಡ ಜಾಸ್ತಿ ಬೆಲೆಗೆ ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ೧–೮೫ ಪೈಸೆಗೆ ಸೀಮೆಎಣ್ಣೆ ಜನರಿಗೆ ದೊರಕುತ್ತಿಲ್ಲ. ಕೈಗಾಡಿಗಳವರೂ ಸಹ ೧–೮೫ ಪೈಸೆಗೆ ಮಾರಾಟ ಮಾಡಿದ ಹಾಗೆ ಸ್ವಲ್ಪ ಜನಗಳಿಗೆ ಕೊಟ್ಟು, ಉಳಿದ ಸೀಮೆಎಣ್ಣೆಯನ್ನು ಜಾಸ್ತಿ ಬೆಲೆಗೆ ಮಾರಾಟ ಮಾಡುವ ಅಂಗಡಿಗಳಿಗೆ ಕೊಟ್ಟುಬಿಡುತ್ತಾರೆ. ಸೀಮೆಎಣ್ಣೆ ಬೆಲೆ ಜಾಸ್ತಿಯಾದ ಬಗ್ಗೆ ಮಾರಾಟ ಮಾಡುವವರನ್ನು ಕೇಳಿದಾಗ ನನ್ನ ಕ್ಷೇತ್ರದಲ್ಲಿ ಇದರ ಬಗ್ಗೆ ದೊಡ್ಡ ಜಗಳವೇ ಆಗಿದೆ. ಕಡಿಮೆ ಬೆಲೆ, ಜಾಸ್ತಿ ಬೆಲೆಗೆ ಮಾರಾಟ ಮಾಡುವುದನ್ನು ಕಂಡುಹಿಡಿಯಲು ಏನಾದರೂ ಸೂಪರ್‌ವೀಷನ್ ಇಟ್ಟಿದ್ದೀರಾ ? ಈಗಿರುವ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಲು ಅನುಕೂಲವಾಗುವಂತೆ ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿ ಬೆಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಏನಾದರೂ ವ್ಯವಸ್ಥೆ ಮಾಡುತ್ತೀರಾ ? ದ್ವಿಮುಖ ಬೆಲೆ ಕೇಂದ್ರ ಸರ್ಕಾರದ ನೀತಿ, ರಾಜ್ಯ ಸರ್ಕಾರದ ನೀತಿಯೇನು ? ತಮ್ಮ ಹೇಳಿಕೆಯಲ್ಲಿ ಕೇಂದ್ರ ಸರ್ಕಾರದ ನೀತಿ ಎಂದು ಬರೆದಿದ್ದೀರಿ, ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಸರಿಯಾದ ರೀತಿಯಲ್ಲಿ ಸೀಮೆಎಣ್ಣೆ ವಿತರಣೆಯಾಗುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಟಿ. ರಾಂದೇವ್.—ಗಮನ ಸೆಳೆಯುವ ಸೂಚನೆಯು ಮುಖಾಂತರ ನಾವು ಮಾತನಾಡುತ್ತೇವೆ ಮಂತ್ರಿಗಳ ಹೇಳಿಕೆಯಲ್ಲಿ ಹೊಸತೇನು ಕಾಣುತ್ತಿಲ್ಲ. ಕೇಂದ್ರ ಸರ್ಕಾರದ ಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಬಡವರ ಉದ್ಧಾರಕ್ಕೋಸ್ಕರ ದ್ವಿಮುಖ ಬೆಲೆ ನೀತಿಯನ್ನು ಜಾರಿಗೆ ತರಲಾಗಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇವತ್ತು ಇಡೀ ರಾಜ್ಯದಲ್ಲಿ ದ್ವಿಮುಖ ಬೆಲೆ ಇದೆ. ಕೇಂದ್ರ ಸರ್ಕಾರದ ದ್ವಿಮುಖ ಬೆಲೆ ನೀತಿಗೆ ಅನುಸಾರವಾಗಿ ಬ್ಲಾಕ್ ಮಾರ್ಕೆಟ್‌ಗೆ ಒಂದು ಪ್ರೋತ್ಸಾಹವನ್ನು ಕೇಂದ್ರ ಸರ್ಕಾರವೇ ಕೊಟ್ಟಂತಾಗಿದೆ. ಹೀಗೆ ಸಿಮೆಂಟ್, ಸಕ್ಕರೆ ಎಲ್ಲಾ ಬೆಲೆಗಳನ್ನು ಇದೇ ರೀತಿ ಮಾಡಿದ್ದಾರೆ. ಈ ರೀತಿ ದ್ವಿಮುಖ ಬೆಲೆ ಅನುಸರಿಸುವುದರಿಂದ ಇವತ್ತು ಬ್ಲಾಕ್ ಮಾರ್ಕೆಟ್ ಮಾಡುವುದಕ್ಕೆ ಒಂದು ಪ್ರೋತ್ಸಾಹವನ್ನು ಕೇಂದ್ರ ಸರ್ಕಾರವೇ ಕೊಡುತ್ತಿದೆ. ಇದರ ಬಗ್ಗೆ ನಮ್ಮ ಸರ್ಕಾರ ಪ್ರತಿಭಟನೆ ಮಾಡುತ್ತದೆಯೆ ? ತಾವು ಕೇಂದ್ರ ಸರ್ಕಾರದ ನೀತಿಗೆ ಯಾವ ರೀತಿಯಲ್ಲಿ ಪ್ರತಿಭಟನೆ ಮಾಡಿದ್ದೀರಿ ? ಎನ್ನತಕ್ಕಂಥಾದ್ದನ್ನು ಹೇಳಬೇಕು. ಎರಡನೆಯದಾಗಿ ಕೇಂದ್ರ ಸರ್ಕಾರದವರು ಏತಕ್ಕಾಗಿ ಈ ರೀತಿ ಮಾಡಿದ್ದಾರೆ ಎನ್ನುವುದನ್ನು ತಾವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲವೇ ? ಪೆಟ್ರೋಲ್ ಕೂಡತಕ್ಕಂತಹ ರಾಷ್ಟ್ರಗಳಲ್ಲಿ ಬೆಲೆ ಕಡಿಮೆ ಇದ್ದರೂ ಕೂಡ ನಮ್ಮ ರಾಷ್ಟ್ರದಲ್ಲಿ ಏತಕ್ಕೆ ಸೀಮೆ ಎಣ್ಣೆಯ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ ? ಅಲ್ಲಿ ಏತಕ್ಕೆ ಕಡಿಮೆ ಮಾಡಿದ್ದಾರೆ. ಅಲ್ಲಿ

ಶೇಕಡ ೨೫ ಪರ್ಸೆಂಟ್ ಬೆಲೆ ಕಡಿಮೆ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದವರು ಏತಕ್ಕಾಗಿ ಸೀಮೆ ಎಣ್ಣೆಯ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಇದರಲ್ಲಿ ರಾಜಕೀಯ ಹಿನ್ನೆಲೆ ಏನಾದರೂ ಇದೆಯೇ. ಆ ರೀತಿ ಏನಾದರೂ ರಾಜಕೀಯ ಹಿನ್ನೆಲೆ ಇದ್ದರೆ ನಮಗೆ ಸ್ಪಷ್ಟವಾಗಿ ತಿಳಿಸಬೇಕು. ಇದರಲ್ಲಿ ರಾಜ್ಯ ಸರ್ಕಾರದ ಹೊಣೆ ಏನಾದರೂ ಇದೆಯೆ ? ಇಲ್ಲವಾದರೆ ಕೇಂದ್ರ ಸರ್ಕಾರದವರೇ ನೇರವಾಗಿ ಈ ರೀತಿ ಮಾಡಿದ್ದಾರೆಯೇ ; ಎಂಬುದನ್ನು ತಿಳಿಸಬೇಕು. ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಸೀಮೆ ಎಣ್ಣೆಯು ಬಾರದೆ ನಮಗೆ ಸರ್‌ಪ್ಲೆಸ್ ಆಗಿರುವುದಕ್ಕೆ ರಾಜ್ಯ ಸರ್ಕಾರ ಏನಾದರೂ ಇದರ ಬಗ್ಗೆ ಯೋಚನೆ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿಸಬೇಕು. ಇದು ಕೇಂದ್ರ ಸರ್ಕಾರದ ನೀತಿಯಾದರೆ ನಾವು ಒಂದು ಹೆಣಿವನ್ನು ಸೃಷ್ಟಿಸಬೇಕಾದರೂ ಸಹ ಕನಿಷ್ಟ ಪಕ್ಷ ೨೦ ಲೀಟರ್ ಸೀಮೆ ಎಣ್ಣೆ ನಮಗೆ ಬೇಕಾಗುತ್ತದೆ. ಹೆಣ ಸಾಡುವುದಕ್ಕೆ ಕೂಡ ನಮಗೆ ಸೀಮೆ ಎಣ್ಣೆ ಸಿಗುವುದಿಲ್ಲ. ಆದ್ದರಿಂದ ನಮ್ಮ ರಾಜ್ಯ ಸರ್ಕಾರದವರು ಇದಕ್ಕೆ ಏನಾದರೂ ಸರ್ಜರೀ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ಪಡಿತರ ಆಕ್ಕಿಯನ್ನು ಪಶಪಡಿಸಿಕೊಳ್ಳುವ ನೀತಿಯನ್ನು ಏತಕ್ಕೆ ಈ ಸೀಮೆಎಣ್ಣೆಯಲ್ಲಿಯೂ ಆಳವಡಿಸಿಕೊಳ್ಳಬಾರದು ? ಈ ಎಲ್ಲಾ ವಿಷಯಗಳನ್ನು ನಮ್ಮ ಮಾನ್ಯ ಮಂತ್ರಿಗಳು ಯೋಚನೆ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ದಯವಿಟ್ಟು ತಿಳಿಸಬೇಕು. ಕಾರ್ಡ್‌ದಾರರಿಗೆ ಎಷ್ಟು ಪ್ರಮಾಣದಲ್ಲಿ ಸೀಮೆ ಎಣ್ಣೆಯನ್ನು ಕೊಡಬೇಕೋ ಆ ಪ್ರಮಾಣದ ಸೀಮೆ ಎಣ್ಣೆಯನ್ನು ಕೂಡ ಇವತ್ತಿನ ದಿವಸ ನಮ್ಮ ಸರ್ಕಾರದವರು ಕೊಡುತ್ತಿಲ್ಲ. ನಮಗೆ ಕೇವಲ ೨ ಸಾವಿರ ಟನ್ ಸೀಮೆ ಎಣ್ಣೆ ಮಾತ್ರ ಕಡಿಮೆಯಾಗಿದೆ. ಇದರಿಂದಾಗಿ ತಾವು ಸೀಮೆ ಎಣ್ಣೆಯನ್ನು ಪಡಿತರ ವ್ಯವಸ್ಥೆಯಲ್ಲಿ ಪೂರೈಕೆ ಮಾಡಿದ್ದೀರಿ. ಮೊದಲು ನಿಮಗೆ ೨೫,೬೦೦ ಟನ್ ಸೀಮೆ ಎಣ್ಣೆಯು ಬರುತ್ತಿದ್ದಾಗ ನೀವು ನಮಗೆ ಇನ್ನು ಹೆಚ್ಚು ಸೀಮೆಎಣ್ಣೆ ಕೊಡಬೇಕೆಂದು ಪ್ರತಿಭಟನೆ ಏನಾದರೂ ಮಾಡಿದ್ದರೆ, ಮಾನ್ಯ ಮಂತ್ರಿಗಳು ಈ ಸದನದಲ್ಲಿ ತಿಳಿಸಬೇಕು. ಸ್ವಾಮಿ, ಇವತ್ತು ಬ್ಲಾಕ್ ಮಾರ್ಕೆಟ್‌ನಲ್ಲಿ ಒಂದು ಲೀಟರ್ ಸೀಮೆ ಎಣ್ಣೆಗೆ ೫ ರೂಪಾಯಿಗಳಂತೆ ವ್ಯಾಪಾರ ಮಾಡುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರದ ನೀತಿಯಂತೆ ಒಂದು ಲೀಟರ್ ಸೀಮೆಎಣ್ಣೆ ೩–೨೨ ಪೈಸೆಗಳಾಗುತ್ತದೆ.

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳುತ್ತಿದ್ದಾರೋ ಅಥವಾ ಇನ್ನು ಏನಾದರೂ ಕೇಳುತ್ತಿದ್ದಾರೆಯೋ ಗೊತ್ತಿಲ್ಲ.

ಶ್ರೀ ಪಿ. ರಾಮೇವ್.—ಸ್ವಾಮಿ ಹೊಸ ಪದ್ಧತಿಯು ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಏನು ನೀತಿಯನ್ನು ಅನುಸರಿಸುತ್ತಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ ನಾನು ಕೂಡ ಇದರ ಬಗ್ಗೆ ಒಂದು ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಇವತ್ತು ಸೀಮೆ ಎಣ್ಣೆಯನ್ನು ವ್ಯಾಪಾರ ಮಾಡುವುದರಲ್ಲಿ ಎರಡು ರೀತಿಯ ಬೆಲೆಯನ್ನು ನಿಗದಿ ಮಾಡಿ ವ್ಯಾಪಾರ ಮಾಡುತ್ತಿದ್ದಾರೆ. ಶೇಕಡ ೭೦ ಪರ್ಸೆಂಟ್ ಸೀಮೆ ಎಣ್ಣೆಗೆ ಕಂಟ್ರೋಲ್ ಇದೆ. ಇನ್ನು ಉಳಿದ ೩೦ ಪರ್ಸೆಂಟ್ ಸೀಮೆ ಎಣ್ಣೆಯು ಕೋ ಆಪರೇಟೀವ್ ಸೊಸೈಟಿಗಳ ಮುಖಾಂತರ ವ್ಯಾಪಾರ ಮಾಡುತ್ತಿದ್ದಾರೆ. ಇದನ್ನು ಸರ್ಕಾರಿ ಮೆಷಿನ್‌ರಿ ಏನಾದರೂ ವಾಚ್ ಮಾಡುತ್ತಿದೆಯೇ ? ಮತ್ತೆ ಕೇಂದ್ರ ಸರ್ಕಾರದ ನೀತಿಯಂತೆ ಒಂದು ಲೀಟರ್ ಸೀಮೆ ಎಣ್ಣೆಯನ್ನು ೩–೨೨ ಪೈಸೆಯಂತೆ ವ್ಯಾಪಾರ ಮಾಡಬೇಕೆಂದು ಇದ್ದರೂ ಕೂಡ ನಮ್ಮ ಕಡೆ ಲೀಟರ್ ಒಂದಕ್ಕೆ ೫ ರೂಪಾಯಿಯಂತೆ ವ್ಯಾಪಾರ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಗುಲ್ಬರ್ಗ ಭಾಗದಲ್ಲಿ ಕೋ ಆಪರೇಟೀವ್ ಸೊಸೈಟಿಗಳಲ್ಲಿ ಕೂಡ ೫ ರೂಪಾಯಿಯಂತೆ ವ್ಯಾಪಾರ ಮಾಡುತ್ತಿದ್ದಾರೆ. ಈ ವಿಷಯವನ್ನು ನಾವು ಸಂಬಂಧಪಟ್ಟ ಡಿ ಪ್ಯೆ.ಎಸ್.ಪಿ. ರವರಿಗೆ ತಿಳಿಸಿದರೂ ಕೂಡ ಅವರು ಇದನ್ನು ಕಂಟ್ರೋಲ್ ಮಾಡಲಿಲ್ಲ ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮುಂದೆ ಸಂಬಂಧಪಟ್ಟ ಕ್ಷೇತ್ರಗಳಿಗೆ ಸೀಮೆ ಎಣ್ಣೆಯನ್ನು ಬಿಡುಗಡೆ ಮಾಡುವಾಗ ಆ ಭಾಗದ ಶಾಸಕರಿಗೆ ವಿಷಯ ತಿಳಿಸಿದರೆ ಒಳ್ಳೆಯದು. ಗುಲ್ಬರ್ಗ ಶಹಬಾದ್ ಮುಂತಾದ ಕಡೆಗಳಲ್ಲಿ ಈ ಒಂದು ಪದ್ಧತಿ ಬಹಳ ಅವ್ಯವಸ್ಥಿತವಾಗಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಿದ್ಯುಚ್ಛಕ್ತಿ ಇರುವುದರಿಂದ ಅವರು ಅದರಲ್ಲಿ ಅಡಿಗೆ ಮಾಡುತ್ತಾರೆ. ಆದರೆ ಹಳ್ಳಿಗಳಲ್ಲಿ ನಾವು ಏನು ಮಾಡಬೇಕು. ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಎಂ ಎಸ್. ಕೃಷ್ಣನ್‌ರವರು

ಹೇಳಿದಂತೆ ರಾಜ್ಯ ಸರ್ಕಾರ ಇದರ ಬಗ್ಗೆ ಸೂಕ್ತವಾದಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ ಈ ಭಾರಿಯ ಕೋಟಾದಲ್ಲಿ ೩ ಸಾವಿರ ಟನ್ ಸೀಮೆಎಣ್ಣೆಯನ್ನು ಕಡಿಮೆ ಕೊಟ್ಟಿದ್ದಾರೆಂದು ಸರ್ಕಾರದವರು ಹೇಳಿದ್ದಾರೆ. ಆ ರೀತಿ ಬದಲಾವಣೆ ಮಾಡುವುದಕ್ಕೆ ಕಾರಣವೇನು? ಕೇಂದ್ರ ಸರ್ಕಾರದ ಜೊತೆ ಇದರ ಬಗ್ಗೆ ಏನಾದರೂ ಚರ್ಚೆ ನಡೆಸಿದ್ದೀರಾ? ಕೇಂದ್ರ ಸರ್ಕಾರದ ನೀತಿಯ ಬಗ್ಗೆ ರಾಜ್ಯ ಸರ್ಕಾರದ ಪ್ರತಿಭಟನೆ ಮಾಡಿದ್ದೀರಾ ? ನಮ್ಮ ರಾಜ್ಯದಲ್ಲಿ ಸೀಮೆ ಎಣ್ಣೆಯ ಅವಶ್ಯಕತೆ ಹೆಚ್ಚಾಗಿರಲಿಲ್ಲವೇ ? ಆರೇಬಿಯಾ ದೇಶದಲ್ಲಿ ಕಡಿಮೆ ಬೆಲೆಗೆ ಕೊಟ್ಟಿದ್ದಾರೆ ಆದರೆ ನಮ್ಮ ರಾಷ್ಟ್ರದಲ್ಲಿ ಬೆಲೆ ಜಾಸ್ತಿ ಮಾಡಿರುವುದಕ್ಕೆ ಕಾರಣವೇನೆಂದರೆ ಕೇಂದ್ರ ಸರ್ಕಾರದಲ್ಲಿ ಒಂದು ಪಕ್ಷ ಆಡಳಿತದಲ್ಲಿ ಇದೆ. ರಾಜ್ಯ ಸರ್ಕಾರಗಳಲ್ಲಿ ಬೇರೆ ಬೇರೆ ಪಕ್ಷಗಳು ಆಡಳಿತದಲ್ಲಿ ಇರುವುದು ಕಾರಣವೇ? ಈ ಎಲ್ಲಾ ಕಾರಣಗಳು ಇತ್ತೀಚೆಗೆ ಸಾರ್ವಜನಿಕರಲ್ಲಿ ಹೆಚ್ಚಾಗಿವೆ. ಕೇಂದ್ರ ಸರ್ಕಾರದ ನೀತಿಯನ್ನು ತಾವು ಚಾಚು ತಪ್ಪದೆ ಪಾಲಿಸುತ್ತೇವೆಂದು ಹೇಳಿದ್ದೀರಿ. ಆದರೆ ತಾವು ಪ್ರತಿಕ್ಕೆ ಪ್ರತಿಭಟನೆ ಮಾಡಲಿಲ್ಲ. ಜನತೆ ಬಹಳ ಕಷ್ಟಪಡುತ್ತಿದ್ದಾರೆ. ನಿಮಗೆ ಕೊಡಬೇಕಾದಂಥ ಕೋಟಾದಲ್ಲಿ ಕೇಂದ್ರ ಸರ್ಕಾರ ಕಡಿಮೆ ಮಾಡಿರುವುದು ಸರಿಯಾದುದ್ದಲ್ಲ. ಈ ರೀತಿ ದ್ವಿಮುಖ ನೀತಿಯನ್ನು ನಾವು ವಿರೋಧ ಮಾಡಲೇ ಬೇಕು.

ಶ್ರೀ ಎಚ್. ನಾಗನಗೌಡ.—ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರವಿದೆಯೆಂದು, ಆ ರೀತಿ ಕೊಡಬೇಕೆಂದು ಕೇಂದ್ರ ಸರ್ಕಾರದ ಭಾವನೆಯಲ್ಲ. ಅಕ್ಕಿಯನ್ನು ಮಾರಾಟ ಮಾಡಲು ಪಡಿತರ ವ್ಯವಸ್ಥೆಯನ್ನು ಯಾವ ನೀತಿಯ ಮೇಲೆ ಜಾರಿಗೆ ತಂದಿದ್ದೀರಿ ? ಆ ನೀತಿ ಏನೆಂದರೆ ಪಟ್ಟಣಗಳಲ್ಲಿ ವಾಸ ಮಾಡುವಂತಹ ಜನರಿಗೆ ಒಂದು ಕೆ ಜಿ. ಅಕ್ಕಿ ೧–೯೦ ಪೈಸೆ ಅದೇ ಹಳ್ಳಿಗಳಲ್ಲಿ ವಾಸ ಮಾಡುವಂತಹ ಜನರಿಗೆ ೨–೪೦ ಪೈಸೆಯಂತೆ ಮಾರಾಟ ಮಾಡುತ್ತಿದ್ದೀರಿ. ಹಳ್ಳಿಗಳಲ್ಲಿ ಯಾವ ನ್ಯಾಯ ಬೆಲೆ ಅಂಗಡಿಗಳು ಕೂಡ ಇರುವುದಿಲ್ಲ. ಇದಕ್ಕೆ ಸರ್ಕಾರ ಯಾವ ಕ್ರಮವನ್ನು ಅನುಸರಿಸುತ್ತದೆ ?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಕರ್ನಾಟಕ ರಾಜ್ಯದಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ಬೆಲೆಗಳು ಗಗನಕ್ಕೇರಿವೆಯೆಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ನಮ್ಮ ಮುಗ್ಧ ಜನರಿಗೆ ಹಾಗೂ ಹಳ್ಳಿಗಾಡಿನ ಜನರಿಗೆ ದಿನಪತ್ರಿಕೆಗಳನ್ನು ವ್ಯಾಸಂಗ ಮಾಡುವ ಅಭ್ಯಾಸವಿಲ್ಲ. ರೇಡಿಯೋ ಕೇಳುವ ಅಭ್ಯಾಸವಿಲ್ಲ. ಇದರಿಂದ ಅಪಪ್ರಚಾರ ಮಾಡಿರುವುದನ್ನು ತಪ್ಪಿಸಲು ಸರ್ಕಾರದವರು ಏನಾದರೂ ಪ್ರಚಾರ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರದ ಮತದಾರರು ಹೇಳುತ್ತಾರೆ. ನಾವು ನಿಮಗೆ ಮತ ಕೊಟ್ಟಿದ್ದಕ್ಕಾಗಿ ಈ ರೀತಿಯಾಯಿತು ಎಂದು ಹೇಳುತ್ತಿದ್ದಾರೆ ಈ ರೀತಿಯ ಅಪಪ್ರಚಾರಗಳು ಕೆಲವು ಕಡೆ ನಡೆದಿದೆ. ಕೇಂದ್ರ ಸರ್ಕಾರದ ಈ ದ್ವಿಮುಖ ನೀತಿಯನು ಎಂಬುದು ಯಾರಿಗೂ ಗೊತ್ತಿಲ್ಲ. ಈ ದ್ವಿಮುಖ ನೀತಿಯಿಂದ ಬಡಜನರಿಗೆ ತೊಂದರೆಯಾಗಿದೆ ಆದ್ದರಿಂದ ನಮ್ಮ ಶಾಸನ ಸಭೆಯ ಎಲ್ಲಾ ಸದಸ್ಯರು ಒಮ್ಮತವಾಗಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಮಾಡಬೇಕು. ಸಾರ್ವಜನಿಕರ ಹಿತದೃಷ್ಟಿಯಿಂದ ಕಾಂಗ್ರೇಸ್ ಪಕ್ಷ ಕೂಡ ನಮ್ಮೊಂದಿಗೆ ಸಹಕರಿಸಬೇಕು. ಕೇಂದ್ರ ಸರ್ಕಾರದ ನೀತಿಯನ್ನು ಬದಲಾವಣೆ ಮಾಡಬೇಕು. ಮತ್ತು ೧–೮೫ ಪೈಸೆಯಂತೆ ಬಡಜನರಿಗೆ ತಾವು ಸೀಮೆ ಎಣ್ಣೆಯನ್ನು ಯಾವ ರೀತಿಯಲ್ಲಿ ಒದಗಿಸಿಕೊಡುತ್ತೀರಿ ? ಎಂಬುದನ್ನು ತಿಳಿಸಬೇಕು.

ಒಬ್ಬ ಮಾನ್ಯ ಸದಸ್ಯರು.—ಆಂಧ್ರ ಮತ್ತು ಕರ್ನಾಟಕ ರಾಜ್ಯದ ಸರ್ಕಾರಗಳನ್ನು ಇದುವರೆಗೂ ಬಡವರ. ಅಲ್ಪಸಂಖ್ಯಾತರ ಸೋಗಿನಲ್ಲಿ ಕ್ರಾಂಗ್ರೆಸ್ 'ಐ' ಪಕ್ಷದ ಪಟ್ಟಭದ್ರಹಿತಾಸಕ್ತಿಗಳು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದವು. ಆದರೆ ಈ ಎರಡೂ ರಾಜ್ಯಗಳ ಸರ್ಕಾರಗಳು ತಮ್ಮ ಕೈತಪ್ಪಿಹೋಗಿದ್ದರಿಂದ ಕೇಂದ್ರ ಸರ್ಕಾರಕ್ಕೆ ಪರಿತಪಿಸುವಂತಾಗಿದೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಸಮಸ್ಯೆ ಇಗುವುದೇನು ? ಮಾನ್ಯ ಸದಸ್ಯರು ಹೇಳುತ್ತಿರುವುದೇನು ? ಎಂಬುದು ಅರ್ಥವಾಗುತ್ತಿಲ್ಲ.

ಮತ್ತೊಬ್ಬ ಮಾನ್ಯ ಸದಸ್ಯರು.—ಕೇಂದ್ರ ಸರ್ಕಾರ ದುರುದ್ದೇಶದಿಂದ ಈ ಎರಡೂ ರಾಜ್ಯಗಳ ಸರ್ಕಾರಗಳನ್ನು.....

(ಗೊಂದಲ)

ಸಾಮಾನ್ಯ ಜನತೆಯಲ್ಲಿ ತಪ್ಪು ಅಭಿಪ್ರಾಯ ಮೂಡುವಂತೆ ಪ್ರಯತ್ನಿಸುತ್ತಿದೆ. ಸೀಮೆಯೆಣ್ಣೆ ವಿತರಣೆಯಲ್ಲಿ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ದ್ವಿಮುಖ ನೀತಿಯನ್ನು ಈ ಶಾಸನಸಭೆ ಖಂಡಿಸುತ್ತದೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ಈ ದ್ವಿಮುಖ ನೀತಿಯನ್ನು ಖಂಡಿಸಬೇಕೆಂದು ಹೇಳುತ್ತಿದ್ದಾರೆ. ಆದರೆ ಇದು ಇಡೀ ರಾಷ್ಟ್ರದಲ್ಲೇ ಜಾರಿಗೊಳಿಸಲಾಗಿರುವಂತಹ ನೀತಿಯಾಗಿದೆ. ಇದೇನೂ ಕರ್ನಾಟಕ ಅಥವಾ ಆಂಧ್ರಪ್ರದೇಶಕ್ಕೆ ಸೀಮಿತವಾಗಿರತಕ್ಕಂಥ ನೀತಿಯಲ್ಲ.

(ಗೊಂದಲ)

ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಬೇಕು. ದೇಶದಲ್ಲಿ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕೆಂಬ ಉದ್ದೇಶದಿಂದ ಬಡವರಿಗೆ ಕಡಿಮೆ ಬೆಲೆಯಲ್ಲಿ ಎಣ್ಣೆ ದೊರೆಯಲಿ ಎಂಬ ದೃಷ್ಟಿಯಿಂದ ಅಳವಡಿಸಿರತಕ್ಕಂಥ ನೀತಿ ಇದಾಗಿದೆ. ಮಾನ್ಯ ಸದಸ್ಯರುಗಳು ಕೇಂದ್ರಸರ್ಕಾರವನ್ನು ಟೀಕೆ ಮಾಡಿದರು. ಆದರೆ ಬಡವರಿಗೆ ಕಡಿಮೆ ದರದಲ್ಲಿ ಸೀಮೆ ಎಣ್ಣೆ ಸಿಗಬೇಕೆಂಬ ಉದ್ದೇಶದಿಂದ ಈ ನೀತಿಯನ್ನು ಕೇಂದ್ರ ಸರ್ಕಾರದವರು ಜಾರಿಗೆ ತಂದಿದ್ದಾರೆ.

ಶ್ರೀ ಮೈಬೆಲ್ ಬಿ. ಫರ್ನಾಂಡೀಸ್.—ಯಾರಿಗೆ ಬೇಕು ಈ ಭಾಷಣ ? ನೀವೇನು ಎಲೆಕ್ಟ್ರಿಸಿಟಿ ಉಪಯೋಗಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಸೀಮೆ ಎಣ್ಣೆಯನ್ನು ಯಾವಾಗ ಕೊಡಬೇಕು, ಎಷ್ಟು ಪ್ರಮಾಣದಲ್ಲಿ ಕೊಡಬೇಕು ಎಂಬ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅದನ್ನು ಡಿಸ್ಟ್ರಿಬ್ಯೂಶನ್ ಮಾಡಬೇಕಾದದ್ದು ರಾಜ್ಯ ಸರ್ಕಾರದವರ ಕರ್ತವ್ಯ. ಬೆಲೆ ಜಾಸ್ತಿ ಎನ್ನುವುದರಲ್ಲಿ ಆಕ್ಷೇಪಣೆ ಇದ್ದರೆ ಅದು ಡಿಸ್ಟ್ರಿಬ್ಯೂಶನ್ ವಿಚಾರದಲ್ಲಿಯೇ ಹೊರತು, ಬೆಲೆ ಏರಿಕೆ ವಿಚಾರದಲ್ಲಿ ಅಲ್ಲ.

ಉಪಾಧ್ಯಕ್ಷರು.—ತಮ್ಮ ಪ್ರಶ್ನೆಗೆ ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳ ಕಳಕಳಿ ನನಗರ್ಥವಾಗಿದೆ. ದುರ್ಬಲವರ್ಗದವರಿಗೆ ರಕ್ಷಣೆಯಾಗಬೇಕು. ಅಗತ್ಯ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡಬೇಕು ಎನ್ನುವ ವಿಷಯದ ಬಗ್ಗೆ ಅವರುಗಳ ಕಳಕಳಿಯನ್ನು ಕಂಡು ಮೆಚ್ಚಿದ್ದೇನೆ, ಸಂತೋಷಗೊಂಡಿದ್ದೇನೆ. ೧೪-೨-೧೯೬೩ರವರೆಗೆ ಒಂದು ವಿಧವಾದ ನೀತಿ ಇತ್ತು. ಸೀಮೇಯೆಣ್ಣೆ ಒಂದು ಲೀಟರ್‌ಗೆ ಒಂದು ರೂಪಾಯಿ ಎಂಭೊತ್ತೊಂದು ಪೈಸೆ ಎಂದು ಇತ್ತು. ೧೪-೨-೧೯೬೩ ರಿಂದ ಕೇಂದ್ರ ಸರ್ಕಾರ ಒಂದು ದ್ವಿಮುಖ ನೀತಿಯನ್ನು ಅನುಸರಿಸಿದೆ. ಸೀಮೆಯೆಣ್ಣೆಯನ್ನು ಡೀಸಲ್‌ನಲ್ಲಿ ಬೆರಕೆ ಮಾಡುತ್ತಾರೆ ಎನ್ನುವ ಕಾರಣವನ್ನು ಇಟ್ಟುಕೊಂಡು. ಈ ದ್ವಿಮುಖ ನೀತಿಯನ್ನು ನಂದಿದ್ದಾರೆ ಈ ಸೀಮೆಯೆಣ್ಣೆ ಸರಬರಾಜು ಮತ್ತು ವಿತರಣೆ ಕೇಂದ್ರದ ಆದೇಶದ ಮೇಲೆ ಹೋಗಬೇಕು. ಅದರ ಪ್ರಕಾರ ಒಂದನೇ ತಾರೀಖಿನಿಂದ ಇಪ್ಪತ್ತನೇ ತಾರೀಖಿನವರೆಗೆ ಸಬ್ಸಿಡೈಸ್ಡ್ ರೇಟ್‌ನಂತೆಯೂ, ಇಪ್ಪತ್ತೊಂದನೇ ತಾರೀಖಿನಿಂದ ಮೂವತ್ತನೇ ತಾರೀಖಿನವರೆಗೆ ನಾನ್‌ಸಬ್ಸಿಡೈಸ್ಡ್ ರೇಟ್‌ನಂತೆಯೂ ಕೊಡಬೇಕು. ಇದರ ಬಗ್ಗೆ ನಾವು ಅಧಿಕಾರ ವಹಿಸಿಕೊಂಡಾಗಿನಿಂದ ರಾಜ್ಯದ ನಾನಾ ಭಾಗಗಳಿಂದ ಗೊಂದಲ, ಕೋಲಾಹಲಗಳು ಉದ್ಭವವಾಗಿದೆ. ನಾನು ಈ ಬಗ್ಗೆ ಅಧಿಕಾರಿಗಳನ್ನು ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್ನಿನ ಅಧಿಕಾರಿಗಳನ್ನು ಕರೆಸಿ ವಿಶೇಷವಾದ ಚರ್ಚೆಯನ್ನು ಮಾಡಿ, ಅದಕ್ಕೆ ಒಂದು ರೂಪುರೇಖೆಗಳನ್ನು ಕೊಟ್ಟು ಸರಿಯಾದ ರೀತಿಯಲ್ಲಿ ವಿತರಣೆ ಮಾಡತಕ್ಕಂಥ ವ್ಯವಸ್ಥೆ ಮಾಡಲಾಯಿತು. ಈ ವಿತರಣೆ ವ್ಯವಸ್ಥೆಯಲ್ಲಿ ಯಾವ ದೋಷವೂ ಇಲ್ಲ. ನ್ಯಾಯಬೆಲೆ ಅಂಗಡಿಗಳ ಮುಖಾಂತರ ಈ ಸಬ್ಸಿಡೈಸ್ಡ್ ಸೀಮೆಯೆಣ್ಣೆಯನ್ನು ಕೊಡಲಾಗುತ್ತಿದೆ. ಮೊದಲನೇ ವಾರ ಮೂರು ಲೀಟರ್, ಎರಡನೇ ವಾರ ಮೂರು ಲೀಟರ್, ಮೂರನೇ ವಾರ ಮೂರು ಲೀಟರ್, ಮತ್ತು ಕೊನೆಯ ವಾರ ಎರಡು ಲೀಟರ್ ಸೀಮೆಯೆಣ್ಣೆಯನ್ನು ನೀಡಲು ವ್ಯವಸ್ಥೆ ಮಾಡಲಾಗಿದೆ. ನಾನ್ ಸಬ್ಸಿಡೈಸ್ಡ್ ರೇಟ್‌ನಲ್ಲಿ ಕೊಡುವ ಸೀಮೆಯೆಣ್ಣೆಯನ್ನು ಗೌವರ್ನ್‌ಮೆಂಟ್ ಏಜೆನ್ಸಿಗಳು, ಕೋ-ಆಪರೇಟಿವ್ ಸೊಸೈಟಿಗಳು,

ಕಾರ್ಪೊರೇಷನ್ ಔಟ್‌ಲೆಟ್‌ಗಳು: ಜನತಾಬಜಾರ್‌ಗಳಂ ಕೊಡುತ್ತವೆ. ಕ್ರಮಬದ್ಧವಾಗಿ ಈ ವ್ಯವಸ್ಥೆಯನ್ನು ಮಾಡಿದವೇಲೆ ಯಾವ ವಿಧವಾದ ದೂರುಗಳೂ ಬಂದಿಲ್ಲ. ಎತಡನೇಯದಾಗಿ ಈ ದ್ವಿಮುಖ ನೀತಿಯ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದರ ಬಗ್ಗೆ ಹೇಳಬೇಕೆಂದರೆ, ಸೀಮೆಯೆಣ್ಣೆಯನ್ನು ಡೀಸೆಲ್ ಜೊತೆ ಬೆರಕೆ ಮಾಡುವುದನ್ನು ತಪ್ಪಿಸಲು ಈ ರೀತಿ ನಿಲುವು ಕೈಗೊಳ್ಳಲಾಗಿದೆ ಎಂಬ ಕೇಂದ್ರ ಸರ್ಕಾರದ ನಿಲುವು ಸರಿಯಾದುದಲ್ಲ. ಈ ಬಗ್ಗೆ ಪ್ರತಿಭಟನೆ ರೂಪದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಬರೆದ್ದಿದ್ದೇವೆ ಮೊದಲಿದ್ದ ನೀತಿಯಂತೆಯೇ ಜಾರಿಗೆ ತರುವುದು ಒಳ್ಳೆಯದೆಂದು ತಿಳಿಸಿದ್ದೇವೆ. ಡಿಸೇಲ್ ಜೊತೆ ಸೀಮೆಯೆಣ್ಣೆ ಬೆರೆಸಿದಲ್ಲಿ ಅಗತ್ಯ ವಸ್ತುಗಳ ಕಾಯಿದೆ ಮತ್ತು ಸೀಮೆಯೆಣ್ಣೆ ಮಾರಾಟಗಾರರ ೧೯೬೧ ಕಾನೂನನ್ನು ಉಲ್ಲಂಘಿಸಿದಂತಾಗುತ್ತದೆ. ಅಂತಹವರ ಮೇಲೆ ಈ ಕಾನೂನುಗಳ ಅನ್ವಯ ಉಗ್ರಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಇದೆ.

೩-೦೦ ಪಿ.ಎಂ.

ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಸರಿಯಾಗಿ ವಿತರಣೆಯನ್ನು ಮಾಡುತ್ತಿದ್ದೇವೆ. ಯಾವುದೇ ರೀತಿಯ ಕಲಬೆರೆಕೆಗೆ ಅವಕಾಶ ಇಲ್ಲದಂತೆ ನೋಡಿಕೊಂಡಿದ್ದೇವೆ. ಮತ್ತೆ ಮಾನ್ಯ ಸದಸ್ಯರು ದ್ವಿಮುಖ ನೀತಿಯ ಬಗ್ಗೆ ಸರ್ಕಾರದ ನಿಲುವು ಏನು ಎಂಬುದಾಗಿ ಹೇಳಿದ್ದಾರೆ. ಅದರ ಬಗ್ಗೆ ಉತ್ತರ ಹೇಳುವುದಾದರೆ ನಮ್ಮಲ್ಲಿ ೪ ಜನ ರೇಂಜ್ ಅಧಿಕಾರಿಗಳು ಇದ್ದಾರೆ, ಮತ್ತು ೩೬ ಜನ ಫುಡ್ ಇನ್ಸ್‌ಪೆಕ್ಟರ್‌ಗಳು ಇದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಮಂತ್ರಿಗಳು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿ ಉತ್ತರ ಕೊಡುತ್ತಿದ್ದಾರೆ. ಉಳಿದ ಜಿಲ್ಲೆಗಳ ಬಗ್ಗೆಯೂ ದಯಮಾಡಿ ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.—ಅನ್ಯಾಯ ನಡೆಯುತ್ತಿದೆ ಎಂಬುದಾಗಿ ದೂರು ಬಂದ ಕಡೆಗಲೆಲ್ಲ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ ಎಸ್. ಕೃಷ್ಣನ್.—ದೂರುಗಳನ್ನು ಕೊಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ದೂರು ಕೊಟ್ಟರೆ ತಾವೇನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಹಳ್ಳಿಗಳ ಕಡೆ ಮತ್ತು ನಗರಕ್ಕೆ ಸಂಬಂಧಪಟ್ಟಂತೆಯೂ ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.—ಸ್ಕ್ವಾಡ್ ತರಹ ಮಾಡಬೇಕೆಂಬುದಾಗಿ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದಷ್ಟು ಬೇಗನೆ ಅದನ್ನು ಮಾಡುವವರಿದ್ದೇವೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳು ಇಲ್ಲವೇ ಇಲ್ಲ.

ಶ್ರೀ ಜಿ. ಬಸವಣ್ಣಪ್ಪ —ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಮೂಲಕ ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರೊಬ್ಬರು ಸೀಮೆ ಎಣ್ಣೆಯನ್ನು ಈ ಕ್ವಾರ್ಟರಿಗೆ ೨೩ ಸಾವಿರ ಮೆಟ್ರಿಕ್‌ಟನ್‌ನ್ನು ಕೊಟ್ಟಿದ್ದಾರಲ್ಲಾ ಅದರ ಬಗ್ಗೆ ನಿಮ್ಮ ನಿಲುವು ಏನು ಎಂಬುದಾಗಿ ಕೇಳಿದ್ದಾರೆ ನಮ್ಮ ಬೇಡಿಕೆ ೩೦ ಸಾವಿರ ಮೆಟ್ರಿಕ್ ಟನ್ ಸೀಮೆ ಎಣ್ಣೆ ಬೇಕೆಂದು, ಅಷ್ಟನ್ನು ಸರಬರಾಜು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಕಾಗದವನ್ನೂ ಬರೆದಿದ್ದೇವೆ. ಈ ಶಾಸನ ಸಭೆ ಅಧಿವೇಶನ ಮುಗಿದ ಮೇಲೆ ನಾನು ದೆಹಲಿಗೆ ಹೋಗಿ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಜೊತೆ ವಿಚಾರ ವಿನಿಮಯ ಮಾಡಿ ನಮಗೆ ಅಗತ್ಯವಾಗಿ ಬೇಕಾದಂತಹ ೩೦ ಸಾವಿರ ಮೆಟ್ರಿಕ್‌ಟನ್ ಸೀಮೆ ಎಣ್ಣೆಯನ್ನು ನಮ್ಮ ರಾಜ್ಯಕ್ಕೆ ಸರಬರಾಜು ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಉಪಾಧ್ಯಕ್ಷರು.—ಈಗಾಗಲೇ ಒಹಳಷ್ಟು ಸಮಯವಾಗಿದೆ. ಈ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮುಂದಿನ ಪ್ರಶ್ನೆಗೆ ಹೊಗೋಣ.

ಶ್ರೀ ಎಚ್. ಡಿ. ಚೌಡಯ್ಯ.—ಗ್ರಾಮಾಂತರ ಪ್ರದೇಶಗಳಲ್ಲಿ ಸೀಮೆ ಎಣ್ಣೆಯನ್ನು ಯಾವ ಏಜೆನ್ಸಿ ಮೂಲಕ ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ ?

ಉತ್ತರ ಇಲ್ಲ.

ಉಪಾಧ್ಯಕ್ಷರು.—ಈಗ ಮುಂದಿನ ಪ್ರಶ್ನೆಗೆ ಹೋಗೋಣ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಚರ್ಚೆಯನ್ನು ಸೋಮವಾರಕ್ಕೆ ಮುಂದೂಡಲಾಗಿದೆ. ಈಗ ಖಾಸಗಿ ಸದಸ್ಯರ ಕಲಾಪ.

ಖಾಸಗೀ ಕಾರ್ಯಕಲಾಪಗಳು.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೆ.....

ಶ್ರೀ ಎಂ. ಎಸ್. ಕೃಷ್ಣನ್.—ಈ ದಿವಸದ ಕಾರ್ಯಕ್ರಮದ ಪಟ್ಟಿ ಪ್ರಕಾರ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಎಂಬುದಾಗಿ ಇದೆ.

ಉಪಾಧ್ಯಕ್ಷರು.—ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸೋಮವಾರಕ್ಕೆ ಮುಂದೂಡಲಾಗಿದೆ. ಈಗ ಖಾಸಗಿ ಕಲಾಪ,

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಮಂಡಿಸುವುದಕ್ಕಿಂತ ಮೊದಲು ಒಂದು ಸಲಹೆಯನ್ನು ಕೊಡುಬಯಸುತ್ತೇನೆ. ಮಾನ್ಯ ಸದಸ್ಯರಿಗೆ ಒಪ್ಪಿಗೆಯಾಗುವುದಾದರೆ ಪರಿಶೀಲನೆ ಮಾಡಬಹುದು. ಶಾಸಕರಿಗೆ ವಿಶ್ರಾಂತಿ ವೇತನ ನಿಲ್ಲಿಸುವ ಬಗ್ಗೆ ನಿರ್ಣಯವನ್ನು ತಾವು ಮಂಡಿಸುವವರಿದ್ದೀರಿ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನು ಎಂಬುದನ್ನು ತಿಳಿದುಕೊಂಡರೆ ಒಳ್ಳೆಯದು. ಹಿಂದೆ ಕೂಡ ಇಂತಹ ನಿರ್ಣಯವನ್ನು ಈ ಸದನದಲ್ಲಿ ಮಂಡಿಸಿದಾಗ ಸಾಕಷ್ಟು ಚರ್ಚೆಯಾಗಿದೆ. ಲೋಕ ಸಭಾ ಸದಸ್ಯರಿಗೂ ಕೂಡ ಒಂದು ವೇತನವನ್ನು ಕೊಡತಕ್ಕಂತಹ ವ್ಯವಸ್ಥೆ ಇದೆ, ನಮ್ಮ ರಾಷ್ಟ್ರದಲ್ಲಿಲ್ಲ. ಇತರೇ ಬೇರೆ ಬೇರೆ ರಾಷ್ಟ್ರಗಳಲ್ಲೂ ನಿವೃತ್ತಿಯಾದಂತಹ ಶಾಸಕರಿಗೆ ನಿವೃತ್ತಿವೇತನ, ಮತ್ತು ಶಾಸಕರಾಗಿರುವವರಿಗೆ ವೇತನವನ್ನು ಕೊಡತಕ್ಕಂತಹ ಪದ್ಧತಿ ಇದೆ, ಮತ್ತು ಅದಕ್ಕಾಗಿ ಕಾನೂನು ಕೂಡ ಇದೆ. ಆದ್ದರಿಂದ ಈ ಒಂದು ನಿರ್ಣಯ ತಮ್ಮ ವ್ಯಯುಕ್ತಿಕ ನಿರ್ಣಯವೋ ಅಥವಾ ಪಕ್ಷದ ಅಭಿಪ್ರಾಯವೋ ಗೊತ್ತಾಗಲಿಲ್ಲ. ಆದರೂ ಈ ಒಂದು ನಿರ್ಣಯವನ್ನು ಮಂಡಿಸಿ ಚರ್ಚೆ ಮಾಡುವುದಕ್ಕಿಂತ ಮೊದಲು ಉಭಯ ಪಕ್ಷಗಳ ಸದಸ್ಯರುಗಳು ಒಂದು ಕಡೆ ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದು ಏನ್ನುವುದು ನನ್ನ ಅಭಿಪ್ರಾಯ. ಇದರಲ್ಲಿ ಆ ಪಕ್ಷದ ಈ ಪಕ್ಷದ ಪ್ರಶ್ನೆಯಲ್ಲ. ಶಾಸಕರು ಮತ್ತು ನಿವೃತ್ತಿಯಾಗಿರುವಂತಹ ಶಾಸಕರ ಪ್ರಶ್ನೆ ಇದೆ. ನಾನು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಒಂದು ನಿರ್ಣಯವನ್ನು ಇಲ್ಲಿ ಮಂಡಿಸುವುದಕ್ಕೆ ಮುನ್ನ ಬೇಗ ಕಡೆ ಕುಳಿತು ಚರ್ಚೆ ಮಾಡೋಣ. ಮಾನ್ಯ ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಬೇರೆ ಬೇರೆ ಪಕ್ಷದ ನಾಯಕರು ಎಲ್ಲರೂ ಕೂಡ ಇದರ ಬಗ್ಗೆ ಆಲೋಚನೆ ಮಾಡಿ ಒಂದು ನಿರ್ಣಯಕ್ಕೆ ಬರಬಹುದು ಏನ್ನುವ ಸಲಹೆಯೊಂದನ್ನು ಕೊಡುತ್ತಿದ್ದೇನೆ. ಏಕೆಂದರೆ ಇದು ಶಾಸಕರ ವೇತನ ಮತ್ತು ನಿವೃತ್ತಿಯಾದಂತಹ ಶಾಸಕರಿಗೆ ನಿವೃತ್ತಿ ವೇತನಕ್ಕೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಚರ್ಚೆಯನ್ನು ನಮ್ಮ ನಮ್ಮೊಳಗೆ ಚರ್ಚೆ ಮಾಡಿಕೊಂಡರೆ ಬಹಳ ಒಳ್ಳೆಯದು ಎಂಬ ಸಲವೆಯನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ಇದನ್ನು ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಶುಕ್ರವಾರವನ್ನು ಖಾಸಗಿ ಕಲಾಪಗಳಿಗೋಸ್ಕರವಾಗಿ ಇಟ್ಟಿರತಕ್ಕಂತ ಪದ್ಧತಿ, ಎಂಬುದಾಗಿ ತಿಳಿದುಕೊಂಡಿದ್ದೇನೆ. ಈ ಒಂದು ನಿರ್ಣಯವನ್ನು ನಾನೂ ಒಪ್ಪುತ್ತೇನೆ. ಸಲಹೆ ಸೂಚಿಸಿರುವುದು ಏನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿಲ್ಲ. ಆದ್ದರಿಂದ ಈಗ ಅಂತಹ ಒಂದು ಖಾಸಗಿ ನಿರ್ಣಯ ಒಂದನ್ನು ತಂದಿದ್ದಾರೆ ಇದು ಪರ ಮತ್ತು ವಿರೋಧ ಅಭಿಪ್ರಾಯಕ್ಕೆ ಬರತಕ್ಕಂತಹ ನಿರ್ಣಯ ಹೌದು. ಅಂತಹ ಒಂದು ನಿರ್ಣಯವನ್ನು ಮಾನ್ಯ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರೆಯವರು ಮಂಡಿಸುತ್ತಿದ್ದಾರೆ. ಇದರಲ್ಲಿ ನೀತಿಯ ಪ್ರಶ್ನೆ ಅಡಕವಾಗಿದೆ. ಸರ್ಕಾರಿ ನೌಕರರು ವೇತನವನ್ನು ತೆಗೆದುಕೊಳ್ಳುವುದಕ್ಕೂ ಮತ್ತು ಸಾರ್ವಜನಿಕ ಜೀವನದಲ್ಲಿದ್ದು ವೇತನವನ್ನು ತೆಗೆದುಕೊಳ್ಳುವುದಕ್ಕೆ ವ್ಯತ್ಯಾಸ ಇದೆ. ಇಲ್ಲಿ ವಿಷಯ ಪ್ರಸ್ತಾಪ ಮಾಡಿದರೆ ಎಲ್ಲ ವಿಷಯಗಳನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ. ಪರ ಮತ್ತು ವಿರೋಧ ಎಲ್ಲ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶವಾಗುತ್ತದೆ. ಒಂದು ಸಾರಿ ನಿರ್ಣಯ ಸದನಕ್ಕೆ ಬಂದ ಮೇಲೆ ಆ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಗೆ ಸಾಧ್ಯ ? ಹಿಂದೆ ಈ ತರಹದ ನಿರ್ಣಯಗಳು ಬಂದಾಗ ಸರ್ಕಾರದವರು ಮಾನ್ಯ ಸದಸ್ಯರುಗಳನ್ನು ಒಪ್ಪಿಸಿ ನಿರ್ಣಯಗಳನ್ನು

ವಾಪಸ್ಸು ತೆಗೆದುಕೊಂಡಿರುವುದೂ ಉಂಟು. ಆದ್ದರಿಂದ ಇದರ ಬಗ್ಗೆ ಸರ್ಕಾರ ಯಾವ ರೀತಿ ಯೋಚನೆ ಮಾಡಿದೆ, ಯಾವ ರೀತಿಯ ತೀರ್ಮಾನಮಾಡಿದ್ದಾರೆ, ಎಂತಹ ಅಭಿಪ್ರಾಯವನ್ನು ಇಟ್ಟು ಕೊಂಡಿದ್ದಾರೆ ಎನ್ನತಕ್ಕಂತಹ ಮಾತನ್ನು ಹೇಳಿದಾಗ ಮಾತ್ರ ಖಾಸಗಿ ಸದಸ್ಯರ ಮೇಲೆ ಒತ್ತಡ ತಂದು ನಿಮ್ಮ ಅಭಿಪ್ರಾಯವನ್ನೇ ನಾವೂ ಇಟ್ಟುಕೊಂಡಿದ್ದೇವೆ ಎನ್ನತಕ್ಕಂತಹ ವಿಚಾರವನ್ನು ಸರ್ಕಾರದವರು ಹೇಳಿದರೆ, ಆಗ ಅದು ಬೇರೆ ವಿಚಾರವಾಗುತ್ತದೆ. ಆದರೆ ತಾವು ಯಾವುದನ್ನೂ ಹೇಳದೆ ಸುಮ್ಮನೆ ಹೇಳಿದರೆ ಹೇಗೆ. ? ಒಂದು ಸಾರಿ ಯಾವುದೇ ನಿರ್ಣಯ ಸದನದಲ್ಲಿ ಮಂಡನೆಯಾದರೆ ವಾಪಸ್ಸು ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ. ಸದನ ಒಪ್ಪಬೇಕಾಗುತ್ತದೆ. ಮತ್ತೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಿರ್ಣಯವನ್ನು ಮಂಡಿಸಿದಂತಹ ಮಾನ್ಯ ಸದಸ್ಯರು ಒಪ್ಪಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನಿದೆ, ಇಂಗಿತ ಏನಿದೆ ಎಂಬುದನ್ನು ಈ ಸಭೆಯ ಮುಂದಿಟ್ಟರೆ ನಿರ್ಣಯವನ್ನು ಮಂಡನೆ ಮಾಡತಕ್ಕಂತಹ ಇಚ್ಛೆ ಇರತಕ್ಕಂತಹ ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ಯೋಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಅವರು ತಮ್ಮ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಕೂಡ ಸದನದ ಒಪ್ಪಿಗೆ ಬೇಕಾಗುತ್ತದೆ. ಆವಾಗ ಸದಸ್ಯರು ತಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಕೂಡ ಕಾನೂನು ಪ್ರಕಾರ ಅವಕಾಶವಾಗುತ್ತದೆ. ನಿಮ್ಮ ಅಭಿಪ್ರಾಯ ಏನು ? ಖಚಿತ ನಿಲುವು ಏನು ? ಎಂಬುದನ್ನು ಸದನಕ್ಕೆ ತಿಳಿಸಬೇಕಾಗುತ್ತದೆ.

ಇದಲ್ಲದೆ ಈ ಒಂದು ನಿರ್ಣಯ ಚರ್ಚೆಗೆ ಬರತಕ್ಕಂಥಾದ್ದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಏತಕ್ಕೆಂದರೆ ಇದರಲ್ಲಿ ಸ್ಪಷ್ಟವಾದ ಅಭಿಪ್ರಾಯ ಬರುತ್ತದೆ. ಆವಾಗ ಮೆರಿಟ್ಸ್ ಮೇಲೆ ಏನು ಬರುತ್ತದೆ ಅನ್ನುವುದು ಗೊತ್ತಾಗುತ್ತದೆ. ಇದು ಬಹಳ ಮುಖ್ಯವಾದ ವಿಚಾರವಾಗಿರುವುದರಿಂದ ಶ್ರೀ ಭೀಮಣ್ಣ ಖಂಡ್ರೆಯವರು ತಂದಿರತಕ್ಕಂಥಾ ಈ ಖಾಸಗಿ ನಿರ್ಣಯ ಚರ್ಚೆಯಾಗಲಿ ಎಂದು ಹೇಳುತ್ತೇನೆ ಬಹುಶಃ ಚರ್ಚೆಯಾದ ಮೇಲೆ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕಾದರೂ ನಿಯಮಾವಳಿ ಪ್ರಕಾರ ಅವಕಾಶ ಇದ್ದೇ ಇದೆ. ಈ ವಿಷಯವನ್ನು ಚರ್ಚೆ ಮಾಡಿದರೆ ಸಾರ್ವಜನಿಕರು ಪತ್ರಿಕೆಯ ಮುಖಾಂತರ ತಮ್ಮ ಅಭಿಪ್ರಾಯವನ್ನೂ ಸಹ ರೂಪಿಸಲು ಅನುಕೂಲವಾಗುತ್ತದೆ. ಇದನ್ನು ಚರ್ಚೆ ಮಾಡದೆ ಹೋದರೆ ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ಸೂಚಿಸಲು ಆಗುವುದಿಲ್ಲ. ಹಿಂದೆ ಎಷ್ಟೋ ಖಾಸಗಿ ನಿರ್ಣಯಗಳನ್ನು ಕೊನೆಯಲ್ಲಿ ವಾಪಸ್ಸು ತೆಗೆದುಕೊಳ್ಳುವುದನ್ನು ನೋಡಿದ್ದೇವೆ, ಆದುದರಿಂದ ಇದು ಚರ್ಚೆಯಾಗಲಿ ಕೊನೆಯಲ್ಲಿ ಮತಕ್ಕೆ ಹಾಕಿದಾಗ, ಮತಕ್ಕೆ ಹಾಕುವ ಮೊದಲು ಈ ಸದನ ಒಪ್ಪಿಕೊಂಡರೆ ಆ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬಹುದು. ಒಟ್ಟಿನಲ್ಲಿ ಹೇಳಬೇಕಾದರೆ ಇದು ಚರ್ಚೆಯಾಗಬೇಕಾಗುವುದು ಬಹಳ ಮುಖ್ಯ ಆದುದರಿಂದ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುತ್ತೇನೆ ತಾವು ಕೂಡ ಈಗ ಏನು ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ ಅದನ್ನು ಹಿಂದಕ್ಕೆ ತೆಗೆದುಕೊಂಡು, ಈ ನಿರ್ಣಯದ ಬಗ್ಗೆ ಈ ಮನೆಯ ಸದಸ್ಯರೆಲ್ಲರೂ ತಮ್ಮ ಅಭಿಪ್ರಾಯಗಳನ್ನು ಸೂಚಿಸಲಿಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನನ್ನ ಸ್ಪಷ್ಟ ಅಭಿಪ್ರಾಯ.

ಶ್ರೀ ಎಂ ವೀರಪ್ಪ ಮೊಯ್ಲಿ— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಖಂಡ್ರೆಯವರು ಈ ಒಂದು ಖಾಸಗಿ ಸೂಚನೆಯನ್ನು ಇಲ್ಲಿ ತಂದಿದ್ದಾರೆ, ಅನೇಕ ಹೊಸ ಸದಸ್ಯರು ಇಲ್ಲಿಗೆ ಬಂದಿದ್ದಾರೆ, ಅವರಿಗೂ ಸಹ ಗೊತ್ತಾಗಲಿ. ಈ ಒಂದು ಖಾಸಗೀ ನಿರ್ಣಯದ ಕಾರ್ಯಕಲಾಪ ಈ ಸದನದಲ್ಲಿ ಬಹಳ ಪ್ರಾಮುಖ್ಯವಾದುದು ಎಂದು ಗೊತ್ತಾಗಲಿ. ಅನೇಕ ಸಂದರ್ಭದಲ್ಲಿ ಇಂಥಾ ಒಂದು ಮಹತ್ವದ ಸೂಚನೆಗೆ ಅವಕಾಶ ಸಿಕ್ಕುವುದಿಲ್ಲ. ಇದು ಬಹಳ ಮಹತ್ವದ್ದಾಗಿರುವುದರಿಂದ ಈ ಒಂದು ಖಾಸಗೀ ನಿರ್ಣಯದಲ್ಲಿ ವಿರೋಧ ಪಕ್ಷದವರೇ ಆಗಿರಲಿ, ಆಡಳಿತ ಪಕ್ಷದವರೇ ಆಗಿರಲಿ ಇದರಲ್ಲಿ ಪಕ್ಷಭೇದ ಮರೆತು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಸೂಚಿಸಬಹುದು. ಇದರಲ್ಲಿ ಯಾವ ಪಕ್ಷಭೇದವೂ ಇಲ್ಲದೇ ಇರುವುದರಿಂದ ಇಂಥಾ ಖಾಸಗೀಕಾರ್ಯಕಲಾಪಗಳಿಗೆ ಹೆಚ್ಚಿನ ಮಾನ್ಯತ್ವ ಬಂದಿದೆ ಇದು ಒಂದು ನೀತಿಯ ಪ್ರಶ್ನೆಯಾಗಿರುವುದರಿಂದ ಚರ್ಚೆ ಆಗಲಿ. ನಮಗೇನೂ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಅಂತ ಏನೂ ಇಲ್ಲ. ತಮಗೂ ಗೊತ್ತಿದೆ ಅನೇಕ ಸಂದರ್ಭದಲ್ಲಿ ಇಂಥಾದ್ದನ್ನು ಮತಕ್ಕೆ ಹಾಕುವ ಮೊದಲು ಹಿಂದಕ್ಕೆ ತೆಗೆದುಕೊಳ್ಳುವ ಪ್ರಸಂಗವೂ ಇದೆ. ಶ್ರೀವಾನ್ ಬಂಗಾರಪ್ಪ ನವರು ಹೇಳಿದ ಹಾಗೆ ಇದು ಒಂದು ನೀತಿ ಪ್ರಶ್ನೆಯಾಗಿದೆ. ಇಂಥಾ ಒಂದು ಪ್ರಶ್ನೆಯನ್ನು ಯಾವಾಗಲೂ ಪತ್ರಿಕೆಯ ಮುಖಾಂತರ, ಲೇಖನದ ಮುಖಾಂತರ ತಿಳಿಸು

ತ್ತಾರೆ, ಅದರ ಮೇಲೆ ಎಷ್ಟೋ ಚರ್ಚೆ ನಡೆದಿದೆ. ಇದು ಒಂದು ಸಾರ್ವಜನಿಕರ ಸೇವೆ ಮಾಡತಕ್ಕಂಥಾವರ ಒಂದು ನಿವೃತ್ತಿ ವೇತನದ ಪ್ರಶ್ನೆ. ಅನೇಕ ಜನರೂ ಕೂಡ ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರಿಂದ ಮಾನವೀಯತೆ ದೃಷ್ಟಿಯಿಂದ ಒತ್ತಡ ಬಂದು ಅನೇಕ ರಾಜ್ಯಗಳಲ್ಲಿ, ರಾಜ್ಯ ಮಟ್ಟದಲ್ಲೂ ಹಾಗೂ ಪಾರ್ಲಿಮೆಂಟ್‌ನಲ್ಲೂ ಕೂಡ ಚರ್ಚೆ ಮಾಡಿ ಇದನ್ನು ಮಾಡಿದ್ದಾರೆ. ತಮಗೆ ಹೇಳಬೇಕಾದರೆ ಇಂಥಾ ಒಂದು ಖಾಸಗೀ ಕಾರ್ಯಕಲಾಪಗಳಿಗೆ ಪಕ್ಷಭೇದವನ್ನು ಮರೆತು ಒಂದು ತತ್ವ, ಒಂದು ನೀತಿಯನ್ನು ಅನುಸರಿಸಿ ಕೆಲಸ ಮಾಡುತ್ತಾರೆ. ಆದುದರಿಂದ ಇದು ಎಲ್ಲದಕ್ಕಿಂತಲೂ ಬಹಳ ಮುಖ್ಯವಾದುದಾಗಿರುತ್ತದೆ. ಆದ್ದರಿಂದ ಇದರ ಬಗ್ಗೆ ಚರ್ಚೆಯಾಗಲಿ, ಇಲ್ಲಿರುವ ಹೊಸ ಸದಸ್ಯರಿಗೂ ಕೂಡ ಇದರ ಬಗ್ಗೆ ತಿಳಿವಳಿಕೆ ಬಂದ ಹಾಗಾಗುತ್ತದೆ. ಈ ಒಂದು ವಿಷಯ, ಸಿದ್ಧಾಂತದ ವಿಚಾರದಲ್ಲಿ ಮಾತನಾಡುವಾಗ ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಚರ್ಚೆಗೆ ಬಿಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೊದಲು ಆಡಳಿತದ ಪಕ್ಷದಲ್ಲಿ ಇದ್ದು ಈಗ ವಿರೋಧ ಪಕ್ಷದಲ್ಲಿ ಬಂದು ಕೂತಿದ್ದಾರೆ. ಅವರು ಇಂಥಾ ಒಂದು ಸೂಚನೆಯನ್ನು ತಂದಿರುವುದು ಬಹಳ ಸಂತೋಷ. ನಾನು ಕೇಳುವುದೇನೆಂದರೆ ವಿರೋಧಪಕ್ಷದ ಸದಸ್ಯರು ಈ ವಿಚಾರದಲ್ಲಿ ಸರ್ವಾನುಮತದ ಅಭಿಪ್ರಾಯಕ್ಕೆ ಬರುವುದು ಸಾಧ್ಯವೇ ಎಂದು ? ಆದ್ದರಿಂದ ಮಾನ್ಯ ಎಸ್.ಆರ್. ಬೊಮ್ಮಾಯಿಯವರು ಹೇಳಿದ ಹಾಗೆ ಈ ವಿಚಾರವನ್ನು ಎಲ್ಲಾ ನಾಯಕರೊಂದಿಗೆ ಚರ್ಚೆ ಮಾಡಿ ಅವರು ಒಂದು ವೇಳೆ ಒಮ್ಮತದ ಅಭಿಪ್ರಾಯಕ್ಕೆ ಬರದೇ ಹೋದರೆ ಮುಂದಿನ ಶುಕ್ರವಾರ ಇದನ್ನು ತಂದರೆ ಈ ಸಭೆಚರ್ಚೆಮಾಡಲಿಕ್ಕೆ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಈವಿಶ್ರಾಂತಿ ವೇತನವನ್ನು ರದ್ದು ಮಾಡಿದರೆ ಒಳ್ಳೆಯದು ಎಂದು ಹೇಳಿ ನನ್ನ ಅಭಿಪ್ರಾಯವನ್ನು ಸೂಚಿಸಂತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಇದರ ಬಗ್ಗೆ ಚರ್ಚೆ ಆಗ ಕೂಡದು ಎಂದು ಸೂಚನೆ ಕೊಡಲಿಲ್ಲಾ. ಅದನ್ನು ಮುಂದೂಡಬೇಕು ಅಂತ ಹೇಳಿದೆ ಅದಕ್ಕೆ ಕಾರಣ ಇಷ್ಟೆ. ಈ ಒಂದು ನಿರ್ಣಯದ ಬಗ್ಗೆ ವಿರೋಧಪಕ್ಷದವರೊಂದಿಗೆ ಚರ್ಚೆ ಮಾಡಿದರೆ ಅನಂತರ ಈ ವಿಷಯದ ಬಗೆ ಒಂದು ನೀತಿಯನ್ನು ರೂಪಿಸಲಿಕ್ಕೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ಹೇಳಿದೆ. ತಮಗೆ ಹೇಳಬೇಕೆಂದರೆ ಸಾರ್ವಜನಿಕರ ಜೀವನದಲ್ಲಿರತಕ್ಕಂಥಾವರ ಬಗ್ಗೆ ಒಂದು ಮಹತ್ವದ ನೀತಿಯನ್ನು ರೂಪಿಸಲಿಕ್ಕೆ ಮೊದಲು ಎಲ್ಲರೂ ಕೂತುಕೊಂಡು ಚರ್ಚೆ ಮಾಡಿದರೆ ಒಳ್ಳೆಯದು. ಇದನ್ನು ಚರ್ಚೆ ಮಾಡಬಾರದೂ ಅಂತ ಅಲ್ಲ. ಇದು ಬಹಳ ಮುಖ್ಯವಾದ ವಿಚಾರ ಆಗಿರುವುದರಿಂದ ಹೊಸ ಸದಸ್ಯರೂ ಸಹ ಆಲೋಚನೆ ಮಾಡಬೇಕಾಗಿದೆ. ಚರ್ಚೆ ಆಗಕೂಡದು ಅಂತ ಹೇಳಿಲ್ಲ. ಮುಂದೂಡಬಹುದು ಅಂತ ಹೇಳಿದೆ. ನಾನೇನು ಇದರ ಬಗ್ಗೆ ಹೇಳಿದೆನೋ ಅದನ್ನು ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗಿಲ್ಲ. ಸದಸ್ಯರು ಒಪ್ಪಿದರೆ, ಈ ಸದನ ಒಪ್ಪಿದರೆ ಚರ್ಚೆ ಆಗಬಹುದು.

ಉಪಾಧ್ಯಕ್ಷರು.—ತಾವು ನಿರ್ಣಯವನ್ನು ಮಂಡನೆ ಮಾಡಬಹುದು,

ಖಾಸಗಿ ನಿರ್ಣಯ

ಶಾಸಕರಿಗೆ ವಿಶ್ರಾಂತಿ ವೇತನ ಕೊಡುವ ಬಗ್ಗೆ

† ಶ್ರೀ ಭೀಮಣ್ಣ ಎಸ್. ಖಂಡ್ರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಎಸ್.ಆರ್. ಬೊಮ್ಮಾಯಿಯವರು ಶ್ರೀಮಾನ್ ವೀರಪ್ಪ ಮೊಯ್ಲಿಯವರು ಶ್ರೀಮಾನ್ ಎಸ್. ಬಂಗಾರಪ್ಪನವರು ಈ ನಿರ್ಣಯದ ಬಗ್ಗೆ ಚರ್ಚೆ ಆಗಲಿ, ಅದಕ್ಕೆ ಏನೂ ಅಡ್ಡಿ ಇಲ್ಲವೆಂದು ಹೇಳಿದ್ದಾರೆ. ಈಗ ನಾನು ಒಂದು ನಿರ್ಣಯವನ್ನು ಮಂಡಿಸುತ್ತೇನೆ. ಅದು ಈ ರೀತಿ ಇದೆ.—

> "ಶಾಸಕರಿಗೆ ವಿಶ್ರಾಂತಿ ವೇತನವನ್ನು ಪಾವತಿ ಮಾಡಲು ಅವಕಾಶ ಕಲ್ಪಿಸಿರುವ ಶಾಸನವನ್ನು ಈ ಕೂಡಲೇ ರದ್ದುಪಡಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ" ಎಂದು ನಾನು ಸೂಚಿಸುತ್ತೇನೆ.

ಪ್ರಸ್ತಾವವನ್ನು ಸಭೆಯ ಮುಂದಿಡಲಾಯಿತು